KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS
6

ಇಲಾಖೆ / ವಿಷಯ : DEPARTMENT / SUBJECT: ಇತರ ರಾಜನೆಗಳ ವಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 04/08/2020

ಮಂದಿರ ಮಾದರಿ ನಿಲ್ದಾಣ

ಉದಯ 4/8/20

ಅಯೋಧ್ಯೆ ರೈಲು ನಿಲ್ದಾಣಕ್ಕೆ ಹೊಸ ರೂಪ ■ ಯೋಜನೆ ಮೊತ್ತ ಹೆಚ್ಚಳ

ಅಯೋಧ್ಯೆ: ಅಯೋಧ್ಯೆಯಲ್ಲಿ ಶ್ರೀರಾಮನ ಭವ್ಯ ಮಂದಿರ ತಲೆಎತ್ತುವ ಮುನ್ನವೇ ನಗರವು ರಾಮಮಂದಿರದ ಮಾದರಿಯ ರೈಲು ನಿಲ್ದಾಣವನ್ನು ಕಾಣಲಿದೆ.

ಎಲ್ಲವೂ ಅಂದುಕೊಂಡಂತೆ ನಡೆದರೆ ಇನ್ನೆರಡು ವರ್ಷಗಳಲ್ಲಿ ಅಯೋಧ್ಯೆ ನಗರದಲ್ಲಿ ಮಂದಿರದ ವಿನ್ಯಾಸದ ಮಾದರಿಯಲ್ಲೇ ರೈಲು ನಿಲ್ದಾಣವು ನಿರ್ಮಾಣವಾಗಲಿದೆ. ರಾಮಮಂದಿರ ನಿರ್ಮಾಣದ ಬಳಿಕ ಅಯೋಧ್ಯೆಗೆ ಲಕ್ಷಾಂತರ ಭಕ್ತಾದಿಗಳು ನಿತ್ಯ ಭೇಟಿ ನೀಡುವ ನಿರೀಕ್ಷೆ ಇರುವುದರಿಂದ ನಿಲ್ದಾಣದ ಆಕರ್ಷಣೆ ಹೆಚ್ಚಿಸಲು ಭಾರತೀಯ ರೈಲ್ವೆಯು ಈ ನಿರ್ಧಾರ ಕೈಗೊಂಡಿದೆ.

ಬಜೆಟ್ ಮೊತ್ತ ಹೆಚ್ಚಳ: ಈಗಿರುವ ರೈಲು ನಿಲ್ದಾಣವೂ ದೇವಾಲಯದ ಮಾದರಿಯಲ್ಲೇ ಇದೆ. ನಿಲ್ದಾಣದ ಆವರಣ, ಮೆಟ್ಟಿಲು ಪ್ಲಾಟ್‌ಫಾರಂ 1-2ಗಳಿಗೆ ಮರುವಿನ್ಯಾಸ ನೀಡಲಾಗುತ್ತದೆ. 2021ರಲ್ಲಿ ಯೋಜನೆ ಪೂರ್ಣಗೊಳ್ಳಲಿದ್ದು ಅಯೋಧ್ಯೆ ನಿಲ್ದಾಣದ ಮರುನಿರ್ಮಾಣಕ್ಕೆಂದು ಮೀಸಲಿಟ್ಟ ಮೊತ್ತವನ್ನು 80 ಕೋಟಿ ರೂ.ಗಳಿಂದ ಈಗ 104 ಕೋಟಿ ರೂ.ಗೆ ಹೆಚ್ಚಿಸಲಾಗಿದೆ.

2 ಹಂತಗಳಲ್ಲಿ ಅಭಿವೃದ್ಧಿ: ರೈಲು ನಿಲ್ದಾಣದ ಅಭಿವೃದ್ಧಿ ಕಾರ್ಯವು 2 ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತದಲ್ಲಿ ನಿಲ್ದಾಣದ ಪ್ಲಾಟ್‌ಫಾರಂಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಎರಡನೇ ಹಂತದಲ್ಲಿ ಹೆಚ್ಚಿನ ಸಂಖ್ಯೆಯ ಶೌಚಾಲಯಗಳು, ವಸತಿ ನಿಲಯಗಳು, ಟಿಕೆಟಿಂಗ್, ಸರ್ಕ್ಯುಲೇಟಿಂಗ್ ಪ್ರದೇಶಗಳು ಇತ್ಯಾದಿ ಸೌಲಭ್ಯಗಳೊಂದಿಗೆ ಹೊಸ ಸ್ಟೇಷನ್ ಕಟ್ಟಡವನ್ನು ನಿರ್ಮಿಸಲಾಗುತ್ತದೆ.



ಕಲಾವಿದನ ಕಲ್ಪನೆಯಲ್ಲಿ ನಿರ್ಮಾಣವಾಗಲಿರುವ ರೈಲು ನಿಲ್ದಾಣದ ಒಂದು ನೋಟ.

ದೀಪ ಹಚ್ಚಿ ಸಂಭ್ರಮ

ಆ.5ರ ಭೂಮಿಪೂಜೆಯನ್ನು ನಾವು ದೀಪಗಳನ್ನು ಹಚ್ಚುವ ಮೂಲಕ ಸಂಭ್ರಮಿಸುತ್ತೇವೆ ಎಂದು ಉತ್ತರಾಖಂಡ ಬಿಜೆಪಿ ಹೇಳಿದೆ. ಅಂದು ಪಕ್ಷದ ಎಲ್ಲ ಕಾರ್ಯಕರ್ತರೂ ತಮ್ಮ ತಮ್ಮ ಮನೆಗಳಲ್ಲಿ ಹಾಗೂ ಪಕ್ಷದ ಕಚೇರಿಗಳಲ್ಲಿ ಹಣತೆಗಳನ್ನು ಹಚ್ಚಲಿದ್ದಾರೆ. ಈ ಸಂಭ್ರಮಾಚರಣೆ ವೇಳೆ ಸಾಮಾಜಿಕ ಅಂತರ ಕಾಯ್ದುಕೊಳ್ಳುತ್ತೇವೆ ಎಂದು ಬಿಜೆಪಿ ತಿಳಿಸಿದೆ.

ಶಿವಸೇನೆ ದೇಣಿಗೆ

ರಾಮಮಂದಿರ ನಿರ್ಮಾಣಕ್ಕಾಗಿ ಶಿವಸೇನೆಯು 1 ಕೋಟಿ ರೂ.ಗಳನ್ನು ದೇಣಿಗೆಯ ರೂಪದಲ್ಲಿ ನೀಡಿದೆ ಎಂದು ಪಕ್ಷ ಸೋಮವಾರ ಹೇಳಿಕೊಂಡಿದೆ. ಈ ಹಿಂದೆ ಪಕ್ಷದ ಆಧ್ಯಕ್ಷೆ ಆಗಿರುವ [illegible] ಅವರು, [illegible] ಕೋಟಿ ರೂ. [illegible] ಅದರಂತೆ, ಭೂಮಿ ಪೂಜೆಗೂ ಮುನ್ನ ಅಂದರೆ ಜುಲೈ 17ರಂದು ಈ ಮೊತ್ತವನ್ನು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗಿದೆ ಎಂದು ಶಿವಸೇನೆ ಟ್ವೀಟ್ ಮೂಲಕ ತಿಳಿಸಿದೆ.

ನಿಲ್ದಾಣದ ಮರುನಿರ್ಮಾಣ ಕಾಮಗಾರಿ ಶುರು

ಇನ್ನೆರಡು ವರ್ಷಗಳಲ್ಲಿ ಪೂರ್ಣ

104 ಕೋಟಿ ರೂ. ವೆಚ್ಚದಲ್ಲಿ ನಿಲ್ದಾಣಕ್ಕೆ ಹೊಸ ರೂಪ

> ಬುಧವಾರದಿಂದ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಕಾರ್ಯ ಆರಂಭವಾಗಲಿದೆ. ನಮ್ಮ ಮುಂದಿನ ಗುರಿ ರಾಮರಾಜ್ಯದ ಸ್ಥಾಪನೆ. ಅದರಲ್ಲೂ ಪ್ರಮುಖವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳನ್ನು ಸಬಲೀಕರಣಗೊಳಿಸುವತ್ತ ನಾವು ಹೆಜ್ಜೆ ಹಾಕುತ್ತೇವೆ.
>
> • ಅಲೋಕ್ ಕುಮಾರ್, ವಿಎಚ್‌ಪಿ ಕಾರ್ಯಾಧ್ಯಕ್ಷ

28 ವರ್ಷಗಳಿಂದ ಉಪವಾಸ

ಮಧ್ಯಪ್ರದೇಶದ ಜಬಲ್ಪುರದ ನಿವೃತ್ತ ಸಂಸ್ಕೃತ ಶಿಕ್ಷಕ ಊರ್ಮಿಳಾ ಚತುರ್ವೇದಿ ರಾಮಮಂದಿರ ನಿರ್ಮಾಣಕ್ಕಾಗಿ 28 ವರ್ಷಗಳಿಂದ ಉಪವಾಸ ನಡೆಸುತ್ತಿದ್ದಾರೆ. 1992ರಲ್ಲಿ ವಿವಾಹಿತ ಕಟ್ಟಡದ ಧ್ವಂಸದ ನಂತರ ಈ ವ್ರತ ಕೈಗೊಂಡಿದ್ದ ಅವರು ಕೇವಲ ಹಣ್ಣು ಮೊಸರು, ಹಾಲು ಸೇವಿಸಿ ರಾಮಜಪ ಆಚರಿಸುತ್ತಿದ್ದಾರೆ. ವಿವಾದಕ್ಕೆ ಶಾಂತಿಯುತ ಪರಿಹಾರ ದೊರೆಯಲಿ ಎನ್ನುವುದು ಅವರ ಆಶಯ. ಈಗ ರಾಮಮಂದಿರ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವವರೆಗೂ ನಾವು ವ್ರತದಲ್ಲಿಯೇ ಇರುತ್ತೇವೆ ಎಂದಿರುವ ಅವರು, ಇನ್ನೂ 3 ವರ್ಷಗಳ ಕಾಲ ವ್ರತ ಮುಂದುವರಿಸಿ, ರಾಮಮಂದಿರದ ಪ್ರಸಾದ ಪಡೆದ ಬಳಿಕ ಉಪವಾಸ ಕೈಬಿಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀರಾಮ ತೀರ್ಥ ಕ್ಷೇತ್ರ ಟ್ರಸ್ಟ್ ಸದಸ್ಯ ವಿಮಲೇಂದ್ರ ಮೋಹನ್ ಮಿಶ್ರಾ ರಾಮ ಮಂದಿರದಲ್ಲಿ ಸೋಮವಾರ ಪ್ರಾರ್ಥನೆ ಸಲ್ಲಿಸಿದರು.

ದೂರ ಉಳಿದ ಉಮಾ ಭಾರತಿ

ಕೊರೊನಾ ಆತಂಕದ ಹಿನ್ನೆಲೆಯಲ್ಲಿ ಬಿಜೆಪಿಯ ಹಿರಿಯ ನಾಯಕಿ ಉಮಾಭಾರತಿ ರಾಮಮಂದಿರ ಭೂಮಿಪೂಜೆಯಿಂದ ದೂರ ಉಳಿಯಲು ನಿರ್ಧರಿಸಿದ್ದಾರೆ. ಈ ಬಗ್ಗೆ ಸೋಮವಾರ ಅವರು ಟ್ವೀಟ್ ಮಾಡಿದ್ದು 'ನಾನು ಇಂದು ಭೋಪಾಲ್‌ನಿಂದ ಹೊರಟರೆ ನಾಳೆ ಸಂಜೆ ವೇಳೆ ಅಯೋಧ್ಯೆ ಸೇರಬಹುದು. ರೈಲಿನಲ್ಲಿ ಪ್ರಯಾಣಿಸುವುದರಿಂದ ನನಗೂ ವೈರಸ್ ಸೋಂಕು ತಗುಲಬಹುದು. ಪ್ರಧಾನಿ ಮೋದಿ ಅವರು ಪಾಲ್ಗೊಳ್ಳುವ ಸಮಾರಂಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯಬಾರದು' ಎಂದು ಹೇಳಿದ್ದಾರೆ. 'ಮೋದಿ ಅವರು ಭೂಮಿಪೂಜೆ ಮುಗಿಸಿಕೊಂಡು ದೆಹಲಿಗೆ ಹೊರಟ ಬಳಿಕ ಅಯೋಧ್ಯೆಗೆ ಹೋಗುತ್ತೇನೆ. ಸರಯೂ ನದಿಯ ತಟದಲ್ಲಿ ವಿಹರಿಸುತ್ತೇನೆ' ಎಂದಿದ್ದಾರೆ.

> ನೂರಾರು ವರ್ಷಗಳ ಹೋರಾಟದ ಬಳಿಕ ಮಂದಿರ ನಿರ್ಮಾಣದ ಸಮಯ ಬಂದಿದೆ. ಜಗದ್ಗುರು ಸ್ವಾಮಿ ಸ್ವರೂಪಾನಂದಜೀ ಮಹರಾಜ್ ಅವರು ಭೂಮಿಪೂಜೆಯ ಮುಹೂರ್ತ ಶುಭದಾಯಕವಾಗಿಲ್ಲ ಎಂದು ಹೇಳುತ್ತಿದ್ದಾರೆ. ಪ್ರಧಾನಿ ಮೋದಿ ಅವರೇ, ದಯವಿಟ್ಟು ಭೂಮಿಪೂಜೆಯ ದಿನವನ್ನು ಮುಂದೂಡಿ.
>
> ದಿಗ್ವಿಜಯ್ ಸಿಂಗ್, ಕಾಂಗ್ರೆಸ್ ಹಿರಿಯ ನಾಯಕ

> ಶ್ರೀರಾಮನ ಅಸ್ತಿತ್ವವನ್ನೇ ತಿರಸ್ಕರಿಸಿದ್ದಂತಹ ಕಾಂಗ್ರೆಸ್ ನಾಯಕರು ಈಗ ರಾಮಮಂದಿರ ನಿರ್ಮಾಣದ ಶುಭ-ಅಶುಭದ ಬಗ್ಗೆ ಮಾತನಾಡುತ್ತಿದ್ದಾರೆ. ರಾಮನಾಮ ಜಪಿಸುವುದರಿಂದ ಯಾವುದೇ ಅಶುಭ ಸಮಯವೂ ಶುಭವಾಗಿ ಮಾರ್ಪಾಡಾಗುತ್ತದೆ.
>
> ಶಿವರಾಜ್ ಸಿಂಗ್ ಚೌಹಾಣ್, ಮಧ್ಯಪ್ರದೇಶ ಸಿಎಂ